"ಅಲ್ವೇಅಲ್ಲ. ನಾನು ನಮ್ಮಮ್ಮನ ಮಗಳೇ. ಚೊಚ್ಚಲ ಮಗಳೇ. ತೌರುಮನೆಗೆ ಅಪರೂಪಕ್ಕಾದ್ರೂ ಬರ್ತಿದ್ಲು ನನ್ನಮ್ಮ..."

"ಹೆಣ್ಣುಮಕ್ಕಳು ಅಂದ್ರೆ ಕೆಲವರಿಗೆ ಅಲರ್ಜಿ ಕಣೇ. ಚೊಚ್ಚಲು ಮಗು ಹೆಣ್ಣಾಯ್ತು ಅಂತ ಬೇಜಾರಾಗಿ..."

"ಥೋ, ಆಗ್ಲೇ ಹೇಳ್ಲಿಲ್ವಾ? ನನ್ನ ತಂಗಿಯಂದ್ರು ಅಂದ್ರೆ ಅಮ್ಮಂಗೆ ಭಾರೀ ಇಷ್ಟ. ತಲೇಮೇಲೆ ಕೂರಿಸ್ಕೊಂಡಿದಾಳೆ ಅವ್ಳನ್ನ..."

"ಕೆಲವ್ರಿಗೆ ಜಾತಕ ಗೀತಕ ಅಂದ್ರೆ ಭಾರೀ ನಂಬಿಕೆ. ನಿಂದೆಲ್ಲೋ ಕೆಟ್ಟ ನಕ್ಷತ್ರ ಅಂದ್ಕೊಂಡು..."

"ಹಾಗೇನಾದ್ರೂ ಆಗಿದ್ರೆ ಅಜ್ಜಿ ಬಾಯಲ್ಲಿ ವಿಷಯ ನಿಲ್ತಿತ್ತಾ? ಯಾವತ್ತೋ ಗೊತ್ತಾಗಿರ್ತಿತ್ತು ನಂಗೆ."

"ಇದಕ್ಕೇನು ಉತ್ರ ಕೊಡ್ಲಿ ನಾನು? ಪೂರ್ವಜನ್ಮದ ಯಾವುದೋ ಕಾರಣ ಇರಬಹುದು ಅಂತ ಅಂದ್ಕೋಬೇಕು ಅಷ್ಟೇ..."

"ಅಮ್ಮನ ವಿಷಯ ಬಿಡಿ, ಅಪ್ಪಾನೂ ಯಾಕೆ ಹಾಗೆ? ನನ್ನ ಕಂಡ್ರೆ ಕಿಂಚಿತ್ತೂ ಪ್ರೀತಿ ಅನ್ನೋದು ಇರ್ಲೇ ಇಲ್ಲ."

"....."

"ಆಯ್ತು ಬಿಡಿ. ಇದಕ್ಕೂ ಪೂರ್ವಜನ್ಮದ ಯಾವುದೋ ಕಾರಣ ಇದೆ ಅಂದುಬಿಡ್ತೀರಿ..."

"ಮತ್ತೇನು ಹೇಳ್ಲಿ ನಳಿನಿ? ನಾನೇನು ಭಾರೀ ಬುದ್ಧಿವಂತ ಅಲ್ಲ. ಮನಃಶಾಸ್ತ್ರ ನಂಗೆ ಗೊತ್ತಿಲ್ಲ. ದೂರ ಇದ್ದೋಳು ದೂರಾನೇ ಆಗ್ಬಿಟ್ಟೆ ಅನ್ಸುತ್ತೆ. ಹಳೇದನ್ನೆಲ್ಲಾ ನಿನ್ನ ತಲೆಯಿಂದ ಕಿತ್ತು ಬಿಸಾಕು. ನಾನೇ ನಿನ್ನ ಅಪ್ಪ, ಅಮ್ಮ, ತಂಗಿ, ತಮ್ಮ, ಬಂಧು, ಬಳಗ ಎಲ್ಲಾ ಅಂದ್ಕೋ. ಗಂಡ ಅನ್ನಿಸ್ಕೊಂಡಿದ್ರೂ ಈ ಎಲ್ಲಾ ಪಾತ್ರಗಳನ್ನೂ ನಿಭಾಯಿಸೋಕೆ ಗೊತ್ತಿದೆ ನಂಗೆ..."

ಅದೆಲ್ಲಿತ್ತೋ ದುಃಖ, ನಳಿನಿ ಅನಂತನ ಕೊರಳು ತಬ್ಬಿಕೊಂಡು, ಎದೆಯಲ್ಲಿ ಮುಖವಿರಿಸಿ, ಭೋರೆಂದು ಅತ್ತಳು.

"ಸುಮ್ನಿರೇ, ದಮ್ಮಯ್ಯ ಸುಮ್ನಿರು. ನೀನು ಹೀಗೆ ಅಳ್ತಿದ್ರೆ ಹೊಟ್ಟೇಲಿರೋ ನಮ್ಮ ಮಗೂಗೆ ಕಷ್ಟ ಆಗಲ್ವಾ?" ತೆಕ್ಕೆಯಲ್ಲಿ ಹಿಡಿದು ಸಂತೈಸುತ್ತಿದ್ದಾನೆ ಅನಂತ. ಅವನಿಗೆ ಗೊತ್ತಿದೆ, ಇದು ವರ್ಷವರ್ಷಗಳಿಂದ ಒಳಗೊಳಗೇ ಕಟ್ಟಿಕೊಂಡಿದ್ದ ವ್ಯಥೆಯನ್ನೆಲ್ಲಾ ಹೇಳಿಕೊಂಡು ನಿರಾಳವಾದ ಹಗುರ ಮನಸ್ಸಿನ ಕಣ್ಣೀರು. ಭಾವನಾತ್ಮಕ ಅವಲಂಬನೆ ದೊರಕಿದ್ದರ ಕುರಿತಾದ ಆನಂದಭಾಷ್ಪ. ಬಾಯಲ್ಲಿ 'ಅಳಬೇಡ' ಅನ್ನುತ್ತಿದ್ದರೂ 'ಅತ್ತು ಹಗುರಾಗಲಿ' ಅನ್ನುತ್ತಿದೆ ಅಂತರ್ಮನ.

ಒಂದಷ್ಟು ಹೊತ್ತು ಕಣ್ಣೀರ್ಗರೆದು ತನ್ನನ್ನು ತಾನು ಸಂತೈಸಿಕೊಂಡಳು ನಳಿನಿ. ಗಂಡನ ಎದೆಯಲ್ಲಿ ಹುದುಗಿಸಿದ್ದ ಮುಖವನ್ನು ಮೇಲೆತ್ತಿ ನೆಟ್ಟಗೆ ಕೂತಳು.

"ಆಯ್ತಾ? ಅತ್ತು ಮುಗೀತಾ? ಈಗ ನನ್ನ ನೆಟ್‌ಬನಿಯನ್ ಹಿಂಡಿದ್ರೆ ಅರ್ಧ ಬಕೆಟ್ ನೀರು ಬರುತ್ತೆ..." ತಮಾಷೆ ಮಾಡಿದ ಅನಂತ, "ಜೊತೆಗೆ ಸಿಂಬಳಾನೂ..." ಸೇರಿಸಿದ.

"ಥೂ..." ಎಂದಳು ನಳಿನಿ. ಕಣ್ಣೀರಿನಿಂದ ತೋಯ್ದ ಮುಖದ ಮೇಲೆ ಅರಳಿದ ಕಿರುನಗು ಜ್ಯೋತ್ಸ್ನೆಯಲ್ಲಿ ಮಿಂಚಿತು.

"ರೀ..." ಅಂದಳು ಅನಂತನ ಮನದನ್ನೆ.

"ಏನೇ, ಹೇಳೋಕೆ ಇನ್ನೂ ಏನಾದ್ರೂ ಬಾಕಿ ಉಳಿಸ್ಕೊಂಡಿದೀಯಾ?"

"ಹೂಂ ಕಣ್ರೀ..."

"ಆಯ್ತು, ಹೇಳ್ಬಿಡು..."